**ಸುಲಭಗೊಳಿಸಲಾದ ಬೇರ್ಪಡಿಕೆ**

ಜನರಲ್ಲಿ ಪದೇ ಪದೇ ಏಳುವ ಪ್ರಶ್ನೆಗಳಿಗೆ ಸಮಾಧಾನಗಳು

| | |
|---|---|
| 1 | **ತ್ಯಾಜ್ಯ ವಿಂಗಡನೆ ಅಥವಾ ಬೇರ್ಪಡಿಕೆ ಎಂದರೇನು?**<br>ತ್ಯಾಜ್ಯ ವಿಂಗಡನೆ ಅಥವಾ ಬೇರ್ಪಡಿಸುವಿಕೆ ಎಂದರೆ, ಒಣ ತ್ಯಾಜ್ಯವನ್ನು ಮರಬಳಸಲು ಸಾಧ್ಯವಾಗುವಂತೆ ಹಾಗೂ ಹಸಿ/ತೇವ ತ್ಯಾಜ್ಯವನ್ನು ಕೊಳೆಸಿ ಗೊಬ್ಬರ ಮಾಡಲು ಸಾಧ್ಯವಾಗುವಂತೆ, ಒಂದಕ್ಕೊಂದು ಸೇರಿಕೊಳ್ಳದಂತೆ ಪ್ರತ್ಯೇಕಿಸುವ ಕಾರ್ಯ. |
| 2 | **ನಾನು ಇದನ್ನು ಏಕೆ ಮಾಡಬೇಕು?**<br>1. ಭೂಭರ್ತಿಗೆ ಹೋಗುವ ತ್ಯಾಜ್ಯ ಪ್ರಮಾಣ ಕಡಿಮೆಯಾಗಿ, ನೀರು ಮತ್ತು ಗಾಳಿ ಮಾಲಿನ್ಯವಾಗುವಂತೆ ಮಾಡಲು ನೀವು ಇದನ್ನು ಮಾಡಬೇಕು.<br>2. ಜೊತೆಗೆ, ಕೊಳೆಸುವುದು, ಮರುಬಳುಸುವುದು ಮತ್ತು ಸುಡುವಂತಹ ಬೇರೆ ಬೇರೆ ಪ್ರಕ್ರಿಯೆಗಳನ್ನು ಬೇರೆ ಬೇರೆ ತ್ಯಾಜ್ಯಗಳಿಗೆ ಅಳವಡಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡಲು ಇದನ್ನು ಮಾಡಬೇಕು. |
| 3 | **ಮನೆಯಲ್ಲಿ ತ್ಯಾಜ್ಯ ನಿರ್ವಹಣೆಯನ್ನು ನಾನು ಹೇಗೆ ಕೈಗೊಳ್ಳಬಹುದು?**<br>1. ಅಡಿಗೆಮನೆಯಲ್ಲಿ ಒಣ ಮತ್ತು ಹಸಿ/ತೇವ ತ್ಯಾಜ್ಯಗಳಿಗೆ ಪ್ರತ್ಯೇಕ ಬಿನ್‌ಗಳನ್ನು ಇರಿಸಿಕೊಳ್ಳಿ<br>2. ಮನೆಯ ಉಳಿದ ಗೃಹತ್ಯಾಜ್ಯಗಳನ್ನು ಸಂಗ್ರಹಿಸಿಡಲು, ಅಂದರೆ ಕಾಗದ. ಪ್ಲಾಸ್ಟಿಕ್ ಇತ್ಯಾದಿಗಳಿಗೆ ಎರಡು ಚೀಲಗಳನ್ನು ಇರಿಸಿಕೊಳ್ಳಿ<br>3. ಅಡಿಗೆಮನೆಯಲ್ಲಿ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸ್ವಚ್ಛವಾಗಿರಿಸಿ, ಒಣಗಿಸಿ, ನಮ್ಮರ ಒಣ ತ್ಯಾಜ್ಯ ಬಿನ್‌ಗೆ ಹಾಕಿ. ಗಾಜು/ಪ್ಲಾಸ್ಟಿಕ್ ಪಾತ್ರೆಗಳಿಂದ ಆಹಾರ ಪದಾರ್ಥಗಳನ್ನು ತೊಳೆದಿಡಿ<br>4. ಹಸಿ ತ್ಯಾಜ್ಯವನ್ನು ಪ್ರತಿನಿತ್ಯ ಮನೆಯಿಂದ ಹೊರಕ್ಕೆ ಕಳಿಸಿ. ಒಣತ್ಯಾಜ್ಯವನ್ನು ಮನೆಯಲ್ಲಿ ಶೇಖರಿಸಿಕೊಂಡು ವಾರಕ್ಕೊಮ್ಮೆ ವಿಲೇವಾರಿ ಮಾಡಿ..<br>5. ಸ್ಯಾನಿಟರಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕಾಗದದ ಚೀಲ ಇರಿಸಿಕೊಳ್ಳಿ. |
| 4 | **ಅಪಾರ್ಟ್ಮೆಂಟ್ ಕಾಂಪ್ಲೆಕ್ಸ್‌ನಲ್ಲಿ ತ್ಯಾಜ್ಯ ನಿರ್ವಹಣೆಗೆ ಮುಂದಾಗಲು ಯಾವ ಮೊದಲು ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು?**<br>1. ಸಮಾನ ಮನಸ್ಕ ಜನರ ಗುಂಪು ರಚಿಸಿಕೊಳ್ಳಿ.<br>2. ನಿಮ್ಮ ಅಪಾರ್ಟ್ಮೆಂಟ್ ಕಟ್ಟಡಗಳ ನೆರೆಹೊರೆಯವರಿಗೆ ನಿಮ್ಮ ಕುಟುಂಬದವರಿಗೆ ತ್ಯಾಜ್ಯ ವಿಂಗಡನೆ ಬಗ್ಗೆ ವಿವರಿಸಿ.<br>3. ಅಪಾರ್ಟ್ಮೆಂಟ್ ಕಟ್ಟಡದೊಳಗೆ ಕೆಲಸ ಮಾಡುವ ಸಿಬ್ಬಂದಿ/ಕೆಲಸಗಾರರಿಗೂ ಇದನ್ನು ಅರ್ಥಮಾಡಿಸಿ<br>4. ಒಣ ತ್ಯಾಜ್ಯ ಹಾಗೂ ಹಸಿ ತ್ಯಾಜ್ಯ ಶೇಖರಿಸಲು ಪ್ರತ್ಯೇಕ ಡ್ರಂಗಳನ್ನು ಇರಿಸಿಕೊಳ್ಳಿ<br>5. ಒಣ ತ್ಯಾಜ್ಯವನ್ನು ಒಣತ್ಯಾಜ್ಯ ಶೇಖರಣೆ ಕೇಂದ್ರ ಅಥವಾ ಸ್ಥಳೀಯ ಹಳೇ ಪೇಪರ್ ವ್ಯಾಪಾರಿಗೆ ತೆಗೆದುಕೊಂಡು ಹೋಗುವಂತೆ ತಿಳಿಸಿ/ಏರ್ಪಾಡು ಮಾಡಿಕೊಳ್ಳಿ. |
| 5 | **ಒಣ ತ್ಯಾಜ್ಯ ಎಂದರೇನು?**<br>ಕಾಗದ, ಪ್ಲಾಸ್ಟಿಕ್,ಲೋಹ, ಗಾಜು, ರಬ್ಬರ್, ಥರ್ಮೋಕೋಲ್‌ಸ್ಟಿರೋಫೋಮ್, ಬಟ್ಟೆ, ಚರ್ಮ, ರೆಕ್ಸಿನ್, ಮರ– ಇಂತಹ ದೀರ್ಘಕಾಲದವರೆಗೆ ಕೊಳೆಯದೆ ಇರುವಂತಹ ವಸ್ತುಗಳನ್ನು ಒಣ ತ್ಯಾಜ್ಯ ಗುಂಪಿಗೆ ಸೇರಿಸಬಹುದು |
| 6 | **ಒಣ ತ್ಯಾಜ್ಯವನ್ನು ನಾನು ಒಂದು ವಾರ ಕಾಲ ಮನೆಯೊಳಗೆ ಶೇಖರಿಸಿಟ್ಟರೆ ಅದರಿಂದ ದುರ್ನಾತ ಬರುತ್ತದೆಯೆ?**<br>ಅದು ಸ್ವಚ್ಛವಾಗಿ ಒಣಗಿಸ ಸ್ಥಿತಿಯಲ್ಲಿದ್ದರೆ ದುರ್ನಾತ ಬರುವುದಿಲ್ಲ. ಹಾಲು, ಮೊಸರು, ಎಣ್ಣೆ, ಇಡ್ಲಿ ಹಿಟ್ಟು, ಯಾವುದೇ ಆಹಾರ ಪದಾರ್ಥಗಳಿರುವ ಪ್ಲಾಸ್ಟಿಕ್ ಪ್ಯಾಕೆಟ್‌ಗಳನ್ನು ತೊಳೆದು, ಒಣಗಿಸಿ, ನಂತರ ಒಣ ತ್ಯಾಜ್ಯ ಚೀಲಕ್ಕೆ ಹಾಕಿ. ಆಗ ಅವುಗಳಿಂದ ದುರ್ನಾತ ಬರುವುದಿಲ್ಲ. |
| 7 | **ನನ್ನ ಮನೆಯಲ್ಲಿ ಜಿರಳೆ, ಇಲಿ ಮತ್ತು ನೊಣಗಳ ಸಮಸ್ಯೆ ಇರುತ್ತದೆಯೆ?**<br>ಒಣ ತ್ಯಾಜ್ಯದಲ್ಲಿ ಆಹಾರದ ತುಣುಕುಗಳು ಅಥವಾ ಸಾವಯವ ವಸ್ತು ಇದ್ದರೆ ಮಾತ್ರ. ಸ್ವಚ್ಛವಾದ ಹಾಗೂ ಒಣಗಿದ ತ್ಯಾಜ್ಯ ಯಾವುದೇ ರೀತಿಯ ಕ್ರಿಮಿಕೀಟಗಳನ್ನು ಆಕರ್ಷಿಸುವುದಿಲ್ಲ. |

| | |
|---|---|
| 8 | **ಪಿಜ್ಜಾ ಮತ್ತು ಕೇಕ್ ಬಾಕ್ಸ್‌ಗಳನ್ನು ನಾನು ಹೇಗೆ ಸಂಗ್ರಹಿಸಬಹುದು?**<br>ಪಿಜ್ಜಾ ಅಥವಾ ಕೇಕ್ ಬಾಕ್ಸ್‌ಗಳೊಳಗಿರುವ ಆಹಾರದ ತುಣುಕುಗಳನ್ನು ಸ್ವಚ್ಛಗೊಳಿಸಿ, ತಕ್ಷಣ ತೇವ ಮಾಡಿದ ಬಟ್ಟೆಯಿಂದ ಬಟ್ಟೆಯಿಂದ ಒರೆಸಿ, ಬಾಕ್ಸ್‌ಗಳನ್ನು ಒಣಗಿಸಿ, ನಂತರ ಒಣ ತ್ಯಾಜ್ಯ ಚೀಲಕ್ಕೆ ಹಾಕಿ. |
| 10 | **ಉಪ್ಪಿನಕಾಯಿ ಹಾಗೂ ಸಾಸ್ ಬಾಟಲ್‌ಗಳನ್ನು ಹೇಗೆ ಶೇಖರಿಸಿಡುವುದು?**<br>ಸಾಸ್ ಬಾಟಲ್‌ಗಳನ್ನು ನೀರಿನಿಂದ ಚೆನ್ನಾಗಿ ನೆನೆಸಬೇಕು. ಉಪ್ಪಿನಕಾಯಿ ಬಾಟಲ್‌ಗಳಲ್ಲಿ ಎಣ್ಣೆಯ ಅಂಶ ಉಳಿದಿರುವುದರಿಂದ, ಅವುಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯಬೇಕು. ಮೂಲಭೂತವಾಗಿ, ಯಾವುದೇ ಬಾಟಲ್, ಬಾಕ್ಸ್‌ಗಳಲ್ಲಿ ಯಾವುದೇ ರೀತಿಯ ಖಾದ್ಯ ಪದಾರ್ತಹದ ಅಂಶ ಉಳಿದುಕೊಳ್ಳಬಾರದು. ನೀವು ಮರುಬಳಕೆ ಮಾಡಲು ಸಾಧ್ಯವಾದುವುದರಿಂದ ಅವುಗಳನ್ನು ಸ್ವಚ್ಛವಾಗಿ ತೊಳೆದುಒಣಗಿಸಿಟ್ಟುಕೊಳ್ಳಿ.. |
| 11 | **ಹಾಲಿನ ಪ್ಯಾಕೆಟ್, ಡೊಸೆ ಪ್ಯಾಕೆಟ್ ಮತ್ತು ಮೊಸರಿನ ಪ್ಯಾಕೆಟ್‌ಗಳನ್ನು ಏನು ಮಾಡಬೇಕು?**<br>ಮೊದಲು ಖಾಲಿಯಾದ ಪ್ಯಾಕೆಟ್‌ಗಳನ್ನು ಚೆನ್ನಾಗಿ ತೊಳೆಯಿರಿ. ಹಾಲಿನ, ದೋಸೆ, ಮತ್ತು ಮೊಸರಿನ ಪ್ಯಾಕೆಟ್‌ಗಳ ಒಂದು ಅಂಚನ್ನು ಸಂಪೂರ್ಣವಾಗಿ ಹರಿದು ತೆರೆಯಿರಿ. ನಂತರ ಅವುಗಳನ್ನು ಚೆನ್ನಾಗಿ ತೊಳೆದುಉ, ಒಣಗಿಸಿ, ನಮ್ತರ ಒಣ ತ್ಯಾಜ್ಯ ಚೀಲಕ್ಕೆ ಹಾಕಿ. |
| 12 | **ನಾನು ಸ್ಥಳೀಯ ದರ್ಶಿನಿ ಹೊಟೆಲ್‌ನಿಂದ ತಿಂಡಿ ತಂದರೆ, ಅವುಗಳನ್ನು ತರುವ ಪ್ಲಾಸ್ಟಿಕ್ ಚೀಲಗಳನ್ನೂ ತೊಳೆಯಬೇಕೆ?**<br>ಖಂಡಿತವಾಗಿ. ಯಾವುದೇ ರೀತಿಯ ಆಹಾರ ಪದರಾಥವನ್ನು ತರುವ ಚೀಲದಲ್ಲಿ ಆಹಾರದ ಅಂಶ ಉಳಿದುಕೊಳ್ಳುತ್ತದೆ. ಆದ್ದರಿಂದ ಅವುಗಳನ್ನು ಸಾಬೂನು ಮತ್ತ್ತು ನೀರಿನಿಂದ ತೊಳೆದು, ಒಣಗಿಸಿ ಒಣತ್ಯಾಜ್ಯ ಚೀಲಕ್ಕೆ ಹಾಕಬೇಕು. |
| 13 | **ನನ್ನ ಜೂಸ್ ಧಾರಕಗಲು/ಟೆರ್ರಾ ಪ್ಯಾಕ್‌ಗಳನ್ನು ತೊಳೆಯಬೇಕೆ?**<br>ಹೌದು. ಇಲ್ಲದಿದ್ದರೆ, ಅವುಗಳಲ್ಲಿರುವ ಸಕ್ಕರೆ ಅಂಶ ಇರುವೆ ಮುಂತಾದ ಕ್ರಿಮಿಕೀಟಗಳನ್ನು ಆಕರ್ಷಿಸುತ್ತದೆ |
| 14 | **ಬಿಸ್ಕತ್/ಬ್ರೆಡ್ ಪ್ಯಾಕೆಟ್‌ಗಳು ಇರುವೆಗಳನ್ನು ಆಕರ್ಷಿಸುತ್ತದೆಯೆ? ಅವುಗಳನ್ನು ಶೇಖರಿಸಿಡುವುದು ಹೇಗೆ?**<br>ಬ್ರೆಡ್/ಬಿಸ್ಕತ್ ಅಥವಾ ಇತರ ಯಾವುದೇ ತಿನಿಸಿನ ಚೂರುಗಳು ಇಲ್ಲದಂತೆ ಖಾಲಿ ಮಾಡಿ. ತಿನಿಸುಗಳಲ್ಲೈ ಎಣ್ಣೆಯ ಅಂಶ ಹೆಚ್ಚಾಗಿದ್ದರೆ, ಅಂತಹ ಪ್ಯಾಕೆಟ್‌ಗಳನ್ನು ತೊಳೆದು ಒಣಗಿಸಿ, ಒಣತ್ಯಾಜ್ಯ ಚೀಲಕ್ಕೆ ಹಾಕಿ. |
| 15 | **ಹಳೆ ಬಟ್ಟೆಗಳು/ಶೂ-ಚಪ್ಪಲಿಗಳು/ಕೈಚೀಲಗಳನ್ನು/ಬೆಲ್ಟ್/ಆಟಿಕೆಗಳನ್ನು ಏನು ಮಾಡಬೇಕು?**<br>ಅವುಗಳು ಉಪಯೋಗಿಸುವ ಸ್ಥಿತಿಯಲ್ಲಿದ್ದರೆ, ಅವುಗಳನ್ನು ಸಂಗ್ರಹಿಸುವ ಸಂಸ್ಥೆಗಳಿಗೆ ನೀಡಿ. ಅವು ಸಂಪೂರ್ಣವಾಗಿ ಹಾಳಾಗಿದ್ದರೆ ಅಥವಾ ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿದ್ದರೆ, ಅವುಗಳನ್ನು ಒಣತ್ಯಾಜ್ಯವಾಗಿ ವಿಂಗಡಿಸಿ ವಿಲೇವಾರಿ ಮಾಡಿ.<br>ಬಟ್ಟೆಗಳಿಗೆ ದೇಹದ ಯಾವುದೇ ದ್ರವ ಪದಾರ್ಥ ಅಂಟಿಕೊಂಡಿದ್ದರೆ, ಅವುಗಳನ್ನು ಸ್ಯಾನಿಟರಿ ತ್ಯಾಜ್ಯವಾಗಿಪರಿಗಣಿಸಬೇಕು..<br>ಬಟ್ಟೆಗಳು ಪೈಂಟ್, ರಾಸಾಯಾನಿಕಗಳಿಂದ ಕೂಡಿದ್ದರೆ, ಅವುಗಳನ್ನು ಅಪಾಯಕಾರಿ ಗೃಹ ತ್ಯಾಜ್ಯವಾಗಿ ವಿಂಗಡಿಸಬೇಕು. |
| 16 | **ಹಳೆ ಹಾಸಿಗೆ/ಹೊದಿಕೆ/ಚಾಪೆ ಮುಂತಾದವುಗಳನ್ನು ಏನು ಮಾಡಬೇಕು?**<br>ಮೇಲಿನಂತೆ |
| 17 | **ನನ್ನ ಹಳೆಯ ಪೀಠೋಪಕರಣ/ಒಡೆದ ಗಾಜಿನ ವಸ್ತುಗಳನ್ನು ಏನು ಮಾಡಬೇಕು?**<br>ಹಳೆಯ ಪೀಠೋಪಕರಣಗಳನ್ನು ಮರುಬಳಕೆ ಮಾಡಬಹುದು, ಇಲ್ಲವಾದಲ್ಲಿ, ಒಡೆದ ಗಾಜಿನ ಜೊತೆ ಕಸವಾಗಿ ಅಥವಾ ನಿಷ್ಕ್ರಿಯ ತ್ಯಾಜ್ಯವಾಗಿ ವಿಲೇವಾರಿ ಮಾಡಬೇಕು. ಇಲ್ಲವಾದಲ್ಲಿ, ಒಡೆದ ಗಾಜಿನ ಜೊತೆ ಕಸವಾಗಿ ಅಥವಾ ನಿಷ್ಕ್ರಿಯ ತ್ಯಾಜ್ಯವಾಗಿ ವಿಲೇವಾರಿ ಮಾಡಬೇಕು. |
| 18 | **ಹಳೆಯ ಪಿಂಗಾಣಿ ಸಾಮಾನು/ಪಾತ್ರೆ/ನಾನ್ ಸ್ಟಿಕ್ ಪ್ಯಾನ್‌ಗಳನ್ನು ಏನು ಮಾಡುವುದು?**<br>ಅವುಗಳು ಒಡೆದಿಲ್ಲದಿದ್ದರೆ, ಅವುಗಳನ್ನು ಒಣತ್ಯಾಜ್ಯವಾಗಿ ಮರುಬಳಕೆ ಮಾಡಬಹುದು. ಇಲ್ಲವಾದಲ್ಲಿ, ಕಸವಾಗಿ ಅಥವಾ ನಿಷ್ಕ್ರಿಯ ತ್ಯಾಜ್ಯವಾಗಿ ವಿಲೇವಾರಿ ಮಾಡಬೇಕು. |
| 19 | **ನನ್ನ ಹಳೆಯ ಕೊಳಾಯಿ/ಒಡೆದ ಸ್ಯಾನಿಟರಿ ವೇರ್‌ಗಳನ್ನು ಏನು ಮಾಡಬೇಕು?** |

| | |
|---|---|
| | ಹಳೆಯ ಕೊಳಾಯಿಗಲು ಮರುಬಳಕೆ ಮಾಡಬಹುದಾದ ಒಣತ್ಯಾಜ್ಯ. ಒಡೆದ ಸ್ಯಾನಿಟರಿ ವೇರ್‌ಗಳು ಕಸ ಅಥವಾ ನಿಷ್ಕ್ರಿಯ ತ್ಯಾಜ್ಯ. |
| 20 | **ಹಳೆಯ ಕಸಬೊರಕೆ/ನೆಲ ಒರೆಸುವ ಬಟ್ಟೆ/ಬಚ್ಚಲು ತೊಳೆಯುವ ಬ್ರಷ್‌ಗಳನ್ನು ಏನು ಮಾಡಬೇಕು?**<br>ಬಚ್ಚಲು ತೊಳೆಯುವ ಬ್ರಷ್ ಸ್ಯಾನಿಟರಿ ತ್ಯಾಜ್ಯವಾಗುತ್ತದೆ. |
| 21 | **ಒಣ ತ್ಯಾಜ್ಯವನ್ನು ಶೇಖರಿಸಿಡುವ ಅತ್ಯಂತ ಉತ್ತಮ ವಿಧಾನ ಯಾವುದು?**<br>ಅವುಗಳನ್ನು ಸ್ವಚ್ಛಗೊಳಿಸಿ ಒಣಗಿಸಿದ ನಂತರ, ಅವುಗಳನ್ನು ವಿಲೇವಾರಿ ಮಾಡುವವರೆಗೆ ಒಂದು ಚೀಲದಲ್ಲಿ ಪ್ರತ್ಯೇಕವಾಗಿ ಶೇಖರಿಸಿಡಿ. |
| 22 | **ಇ–ತ್ಯಾಜ್ಯ ಎಂದರೇನು?**<br>ಇ–ತ್ಯಾಜ್ಯ ಅಥವಾ ಎಲೆಕ್ಟ್ರಾನಿಕ್ ತ್ಯಾಜ್ಯಗಳಲ್ಲಿ ಬ್ಯಾಟರಿಗಳು, ಕಂಪ್ಯೂಟರ್ ಬಿಡಿಭಾಗಗಳು, ವಿದ್ಯುತ್ ತಂತಿ/ಕೇಬಲ್, ಯಾವುದೇ ರೀತಿಯ ವಿದ್ಯುತ್ ಉಪಕರಣ ಅಥವಾ ಅವುಗಳ ಬಿಡಿಭಾಗಗಳು, ಎಲೆಕ್ಟ್ರಾನಿಕ್ ಅಥವ ಅವಿದ್ಯುತ್ ಚಾಲಿತ ಆಟಿಕೆಗಳು, ರಿಮೋಟ್‌ಗಳು, ಗಡಿಯಾರಗಳು, ಮೊಬೈಲ್ ಫೋನ್, ಬಲ್ಬ್, ಟ್ಯೂಬ್ ಲೈಟ್ ಮತ್ತು ಸಿ ಎಫ್ ಎಲ್ ಮುಂತಾದುವುಗಳು ಒಳಗೊಳ್ಳುತ್ತವೆ.. |
| 23 | **ನಾನು ಇ–ತ್ಯಾಜ್ಯವನ್ನು ಹೇಗೆ ಶೇಖರಿಸಬಹುದು?**<br>ಅವುಗಳನ್ನು ಪ್ರತ್ಯೇಕವಾಗಿ ಮುಚ್ಚಳವಿರುವ ಧಾರಕಗಳಲ್ಲಿ, ತೇವಾಂಶ ಸೇರಿಕೊಳ್ಳದಂತೆ ಶೇಖರಿಸಿ. ಅವುಗಳ ಜೊತೆ ಇತರ ಯಾವುದೇ ವಸ್ತುಗಳನ್ನು ಸೇರಿಸಬಾರದು. |
| 24 | **ಹಸಿ/ತೇವ ತ್ಯಾಜ್ಯ ಎಂದರೇನು?**<br>ಹಸಿ ಅಥವಾ ತೇವ ತ್ಯಾಜ್ಯಗಳಲ್ಲಿ, ತರಕಾರಿ ಸಿಪ್ಪೆ, ಹಣ್ಣಿನ ಸಿಪ್ಪೆ, ಟೀ ಸೊಪ್ಪು, ಕಾಫಿಪುಡಿ, ಮೊಟ್ಟೆಚಿಪ್ಪು, ಮೂಳೆಗಳು, ಮಾಂಸದ ತುಣುಕುಗಲು, ಮೀನಿನ ಭಾಗಗಳು, ಬೇಯಿಸಿದ ಆಹಾರ ಪದಾರ್ಥ(ಮಾಂಸಾಹಾರಿ ಹಾಗೂ ಶಾಖಾಹಾರಿ) ಸೇರಿದಂತೆ ಅಡಿಗೆ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಗಳು ಸೇರುತ್ತವೆ. |
| 25 | **ಹಸಿ ತ್ಯಾಜ್ಯವನ್ನು ನಾನು ಮನೆಯಲ್ಲಿಯೇ ಕೊಳೆಸಿ ಗೊಬ್ಬರ ಮಾಡಬಹುದೆ?**<br>ಖಂಡಿತವಾಗಿ. ಒಂದು ಪ್ರತ್ಯೇಕವಾದ ಹಳ್ಳ/ಗೊಬ್ಬರಗುಂಡಿ ತೋಡಿ ಹಸಿ ತ್ಯಾಜ್ಯವನ್ನು ಮನೆಯ ಹಿತ್ತಲಲ್ಲಿ ಗೊಬ್ಬರ ಮಾಡಬಹುದು |
| 26 | **ಮನೆಯಲ್ಲಿ ಹಸಿ ತ್ಯಾಜ್ಯವನ್ನು ಗೊಬ್ಬರ ಮಾಡಲು ನನಗೆ ಸಮಯವಿಲ್ಲ,, ಉಳಿದ ಪರ್ಯಾಯಗಳೇನು?**<br>ನೀವು ದೊಡ್ಡ ಅಪಾರ್ಟ್‌ಮೆಂಟ್ ಕಟ್ಟಡದಲ್ಲಿ ವಾಸಿಸುತ್ತಿದ್ದರೆ, ಟ್ಯಾಂಕ್ ಗೊಬ್ಬರ ವ್ಯವಸ್ಥೆ ಅಥವಾ ಓ ಡಬ್ಲ್ಯು ಸಿ ಯಂಥ ಸಾಮುದಾಯಿಕ ಗೊಬ್ಬರ ಮಾಡುವ ವ್ಯವಸ್ಥೆಗೆ ಹಸಿ ತ್ಯಾಜ್ಯ ಹಾಕಿ ಕೊಳೆಸಬಹುದು. ಹಾಗಾಗದಿದ್ದರೆ, ಪ್ರತಿನಿತ್ಯ ಹಸಿ ತ್ಯಾಜ್ಯವನ್ನು ಬೃ.ಬೆಂ.ಮ.ಪಾ.ಗೆ ನೀಡಬಹುದು. |
| 27 | **ನಾನು ಪ್ಲಾಸ್ಟಿಕ್ ಲೈನರ್ ಬಳಸದಿದ್ದರೆ, ಆಹಾರ ತ್ಯಾಜ್ಯವನ್ನು ಬಿನ್‌ಗೆ ಹೇಗೆ ಹಾಕುವುದು?**<br>ಬಿನ್ ಲೈನರ್‌ಗಳು ಬರುವುದಕ್ಕೆ ಮುನ್ನ, ನಾವೆಲ್ಲ ಅಂತಹ ತ್ಯಾಜ್ಯವನ್ನು ಬಿನ್‌ಗೆ ಹಾಕಿ, ಖಾಲಿ ಮಾಡಿದ ನಂತರ ಚೆನ್ನಾಗಿ ತೊಳೆದಿಡುತ್ತಿದ್ದೆವು. ಈಗಲೂ ಅದನ್ನೇ ಮಾಡಬಹುದು. ಹಸಿ ತ್ಯಾಜ್ಯವನ್ನು ನೇರವಾಗಿ ಬಿನ್‌ಗೆ ಹಾಕಲು ಇಷ್ಟವಿಲ್ಲದಿದ್ದರೆ, ಕಾಗದ ಅಥವಾ ಮರದಪುಡಿಯನ್ನು ಬಿನ್‌ಗೆ ಸವರಬಹುದು. |
| 28 | **ಜೈವಿಕ ವೈದ್ಯಕೀಯ(ಬೈಯೋಮೆಡಿಕಲ್) ತ್ಯಾಜ್ಯ ಎಂದರೇನು?**<br>ಈ ತ್ಯಾಜ್ಯದಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಬಳಸುವ ಮುಟ್ಟಿನ ಅಥವಾ ಋತುಸ್ರಾವ ಬಟ್ಟೆ, ಸ್ಯಾನಿಟರಿ ನ್ಯಾಪ್‌ಕಿನ್, ಬಿಸಾಡುವ ಡೈಯಾಪರ್, ಬ್ಯಾಂಡೇಜ್ ಮತ್ತು ರಕ್ತ ಅಥವಾ ದೇಹದ ಯಾವುದೇ ದ್ರವ ಪದಾರ್ಥ ಅಂಟಿಕಿಂಡ ವಸ್ತು/ಬಟ್ಟೆ ಸೇರುತ್ತದೆ. |
| 29 | **ಸ್ಯಾನಿಟರಿ ಪ್ಯಾಡ್ ಮತ್ತು ಡೈಯಾಪರ್‌ಗಳನ್ನು ಹೇಗೆ ವಿಲೇವಾರಿ ಮಾಡಬೇಕು?**<br>ಅವುಗಳನ್ನು ಸುದ್ಧಿಪತ್ರಿಕೆಗಳಲ್ಲಿ ಸುತ್ತಿ, ಒಂದು ಕೆಂಪು ಗ್ರುತು ಹಾಕಿ, ಪ್ರತಿನಿತ್ಯ ಬೃ.ಬೆಂ.ಮ.ಪಾ.ಗೆ ನೀಡಬೇಕು |
| 30 | **ಅವಧಿ ಮುಗಿದ ಔಷಧಿಗಳು/ಚುಚ್ಚುಮದ್ದುಗಳು/ಕಾಂಡೋಂ/ಹೊಲಸಾದ ಹತ್ತಿ ಮುಂತಾದುವನ್ನುಹೇಗೆ ವಿಲೇವಾರಿ ಮಾಡಬೇಕು?**<br>**ಅವಧಿ ಮುಗಿದ ಔಷಧಿಗಳು/ಚುಚ್ಚುಮದ್ದುಗಳು, ಬಳಸಿದ ಸಿರಿಂಜ್‌ಗಳು ಅಪಾಯಕಾರಿ ಗೃಹ ತ್ಯಾಜ್ಯ ಗುಂಪಿಗೆ ಸೇರುತ್ತವೆ.** |

| | |
|---|---|
| | **ಅವುಗಳನ್ನು ಇತರ ವರ್ಗಗಳ ತ್ಯಾಜ್ಯಗಳಿಂದ ಪ್ರತ್ಯೇಕವಾಗಿ ಶೇಖರಿಸಿ, ಮೂರು ತಿಂಗಳಿಗೊಮ್ಮೆ ಬೃ.ಬೆಂ.ಮ.ಪಾ.ಗೆ ನೀಡಬೇಕು**.<br>ಕಾಂಡೋಂ, ಹೊಲಸಾದ ಹತ್ತಿ ಇತ್ಯಾದಿಗಳು ಸ್ಯಾನಿಟರಿ ತ್ಯಾಜ್ಯದಡಿ ಬರುತ್ತವೆ. ಅವುಗಳನ್ನು ಸುದ್ದಿಪತ್ರಿಕೆಗಳಲ್ಲಿ ಸುತ್ತಿ, ಒಂದು ಕೆಂಪು ಗ್ರುತು ಹಾಕಿ, ಪ್ರತಿನಿತ್ಯ ಬೃ.ಬೆಂ.ಮ.ಪಾ.ಗೆ ನೀಡಬೇಕು |
| 31 | **ನಾನು ಬಳಸುವ ಕ್ಷೌರದ ಬ್ಲೇಡ್/ರೇಜ಼ರ್ ಜೈವಿಕ ವೈದ್ಯಕೀಯ ತ್ಯಾಜ್ಯವೆಂದು ಪರಿಗಣಿಸಲ್ಪಡುತ್ತದೆಯೆ?**<br>ಅವು, ಬಳಸಿದ ಸಿರಿಂಜ್‌ಗಳ ಹಾಗೆ ಅಪಾಯಕಾರಿ ಗೃಹ ತ್ಯಾಜ್ಯಗಳು. **ಅವುಗಳನ್ನು ಇತರ ವರ್ಗಗಳ ತ್ಯಾಜ್ಯಗಳಿಂದ ಪ್ರತ್ಯೇಕವಾಗಿ ಶೇಖರಿಸಿ, ಮೂರು ತಿಂಗಳಿಗೊಮ್ಮೆ ಬೃ.ಬೆಂ.ಮ.ಪಾ.ಗೆ ನೀಡಬೇಕು**. |
| 32 | **ವ್ಯಾಕ್ಸಿಂಗ್ ಸ್ಟ್ರಿಪ್‌ಗಳನ್ನು ಏನು ಮಾಡಬೇಕು?**<br>ಬಳಸಿದ ವ್ಯಾಕ್ಸಿಂಗ್ ಸ್ಟ್ರಿಪ್‌ಗಳು ಸ್ಯಾನಿಟರಿ ತ್ಯಾಜ್ಯದಡಿ ಬರುತ್ತವೆ. ಅವುಗಳನ್ನು ಸುದ್ದಿಪತ್ರಿಕೆಗಳಲ್ಲಿ ಸುತ್ತಿ, ಒಂದು ಕೆಂಪು ಗ್ರುತು ಹಾಕಿ, ಪ್ರತಿನಿತ್ಯ ಬೃ.ಬೆಂ.ಮ.ಪಾ.ಗೆ ನೀಡಬೇಕು. |
| 33 | **ಅಪಾಯಕಾರಿ ತ್ಯಾಜ್ಯಗಳೆಂದರೇನು?**<br>ಅಪಾಯಕಾರಿ ಗೃಹತ್ಯಾಜ್ಯಗಳಲ್ಲಿ ಮೂರು ಉಪ ವರ್ಗಗಳು ಒಳಗೊಂಡಿವೆ– ಇ–ತ್ಯಾಜ್ಯ, ಪೈಂಟ್, ಶುಚೀಕರಿಸುವ ಸಾಧನಗಳು, ಕೀಟನಾಶಕಗಳು ಮತ್ತು ಅವುಗಳ ಬಾಟಲ್/ಪ್ಯಾಕ್‌ಗಳು, ಇತರ ರಾಸಾಯನಿಕಗಳು ಮತ್ತು ಬಳಸಿದ ಸಿರಿಂಜ್, ಅವಧಿ ಮುಗಿದ ಔಷಧಿಗಳು, ಥರ್ಮಾಮೀಟರ್(ಉಷ್ಣಮಾಪಕ), ಬಳಸಿದ ಶೃಂಗಾರ ಸಾಧನಗಳು ಇತ್ಯಾದಿಯಂಥ ಜೈವಿಕ ವೈದ್ಯಕೀಯ ತ್ಯಾಜ್ಯಗಳಂಥ ವಿಷಕಾರಿ ತ್ಯಾಜ್ಯ.. |
| 34 | **ನನೌ ಈಗಷ್ಟೇ ನನ್ನ ಮನೆ/ಕೋಣೆಗೆ ಪೈಂಟ್ ಮಾಡಿಸಿದೆ. ಅರ್ಧ ಉಳಿದ ಪೈಂಟ್ ಡಬ್ಬಗಳನ್ನು ಹೇಗೆ ವಿಲೇವಾರಿ ಮಾಡಲಿ?**<br>ಅವು ಅಪಾಯಕಾರಿ ಗೃಹತ್ಯಾಜ್ಯದಡಿ ಬರುತ್ತವೆ. **ಅವುಗಳನ್ನು ಇತರ ವರ್ಗಗಳ ತ್ಯಾಜ್ಯಗಳಿಂದ ಪ್ರತ್ಯೇಕವಾಗಿ ಶೇಖರಿಸಿ, ಮೂರು ತಿಂಗಳಿಗೊಮ್ಮೆ ಬೃ.ಬೆಂ.ಮ.ಪಾ.ಗೆ ನೀಡಬೇಕು** . |
| 35 | **ಶೃಂಗರ ಸಾಧನಗಳನ್ನು(ಕಾಸ್ಮೆಟಿಕ್ಸ್)ಯಾವ ವರ್ಗದ ತ್ಯಾಜ್ಯದಡಿ ಇರಿಸಬೇಕು?**<br>ಅವು ಅಪಾಯಕಾರಿ ಗೃಹತ್ಯಾಜ್ಯದಡಿ ಬರುತ್ತವೆ. **ಅವುಗಳನ್ನು ಇತರ ವರ್ಗಗಳ ತ್ಯಾಜ್ಯಗಳಿಂದ ಪ್ರತ್ಯೇಕವಾಗಿ ಶೇಖರಿಸಿ, ಮೂರು ತಿಂಗಳಿಗೊಮ್ಮೆ ಬೃ.ಬೆಂ.ಮ.ಪಾ.ಗೆ ನೀಡಬೇಕು**. |
| 36 | **ಕೀಟನಾಶಕಗಳು, ಶುದ್ಧಗೊಳಿಸುವ ದ್ರಾವಣಗಳು ಮತ್ತು ಸೊಳ್ಳೆ ಬತ್ತಿ/ಸೊಳ್ಳೆ ನಿರೋಧಕ ಸಾಧನಗಳು ಯಾವ ವರ್ಗಕ್ಕೆ ಸೇರುತ್ತವೆ?**<br>ಮೇಲಿನಂತೆ. |
| 37 | **ಹಾಳಾದ ಟ್ಯೂಬ್ ಲೈಟ್ ಹಾಗೂ ಬಲ್ಬ್‌ಗಳನ್ನು ಏನು ಮಾಡಬೇಕು?**<br>ಮೇಲಿನಂತೆ |
| 38 | **ನಾಯಿಯ ಮಲವನ್ನು ಏನು ಮಾಡುವುದು? ಅದಕ್ಕೆ ಅತಿಸಾರ/ಭೇದಿಯಾದರೆ ಏನು ಮಾಡಬೇಕು? ಅದನ್ನು ವಿಲೇವಾರಿ ಮಾಡುವ ಉತ್ತಮ ವಿಧಾನ ಯಾವುದು?**<br>ಸ್ಯಾನಿಟರಿ ತ್ಯಾಜ್ಯದಡಿ ಬರುತ್ತವೆ. ಅವುಗಳನ್ನು ಸುದ್ದಿಪತ್ರಿಕೆಗಳಲ್ಲಿ ಸುತ್ತಿ, ಒಂದು ಕೆಂಪು ಗ್ರುತು ಹಾಕಿ, ಪ್ರತಿನಿತ್ಯ ಬೃ.ಬೆಂ.ಮ.ಪಾ.ಗೆ ನೀಡಬೇಕು. ನಿಮ್ಮ ನಾಯಿ ಅಥವ ಅಬೆಕ್ಕು ಅಥವಾ ಸಾಕುಪ್ರಾಣಿಗೆ ಭೇದಿಯಾಗಿದ್ದರೆ, ಒರೆಸುವ ಬಟ್ಟೆಯಲ್ಲಿ ಸ್ವಚ್ಛ ಮಾಡಿ , ಆ ತ್ಯಾಜದ ಗುಂಪಿಗೆ ಸೇರಿಸಿ. |
| 39 | **ಮನುಷ್ಯರ ಕೂದಲು/ಉಗುರುಗಳನ್ನು ಏನು ಮಾಡುವುದು?**<br>ŗ್ಯಾನಿಟರಿ ತ್ಯಾಜ್ಯದಡಿ ಬರುತ್ತವೆ. ಅವುಗಳನ್ನು ಸುದ್ದಿಪತ್ರಿಕೆಗಳಲ್ಲಿ ಸುತ್ತಿ, ಒಂದು ಕೆಂಪು ಗ್ರುತು ಹಾಕಿ, ಪ್ರತಿನಿತ್ಯ ಬೃ.ಬೆಂ.ಮ.ಪಾ.ಗೆ ನೀಡಬೇಕು. |
| 40 | **ಕೈತೋಟದ ತ್ಯಾಜ್ಯವನ್ನು ಏನು ಮಾಡಬೇಕು?**<br>ಕೈತೋಟ ತ್ಯಾಜ್ಯಗಳನ್ನು ನಿಗದಿತ ದಿನಗಳಂದು ಬೃ.ಬೆಂ.ಮ.ಪಾ. ಸಂಗ್ರಹಿಸುತ್ತದೆ ಅಥವಾ ನಿಮ್ಮ ಮನೆ ಸಮೀಪ ನಾದಿಪಡಿಸಲಾದ ಹಸಿತ್ಯಾಜ್ಯ ಶೇಖರಣೆ ಸ್ಥಳಕ್ಕೆ ನೀಡಬೇಕು. |